◆ **ವಿಶ್ವವಿದ್ಯಾಲಯದಲ್ಲಿ ಹತ್ತಿರ ಹತ್ತಿರ 40 ವರ್ಷ ಕೆಲಸ ಮಾಡಿದ್ದೀರಿ. ವಿಶ್ವವಿದ್ಯಾಲಯಗಳೆಂದರೆ ರಾಜಕೀಯದ ಅಖಾಡಗಳೆಂಬ ಮಾತಿದೆ. ನೀವು ಪ್ರಕಟವಾಗಿ ಎಲ್ಲೂ ಹೇಳಿಕೊಂಡಿಲ್ಲವಾದರೂ ಅದರ ಬಿಸಿ–ಕಹಿ ನಿಮಗೆ ತಟ್ಟಿಲ್ಲವೆ?**

ಖಂಡಿತ ತಟ್ಟಿದೆ. ಸಾಕಷ್ಟು ಕಹಿ ಪ್ರಸಂಗಗಳೂ ಇವೆ. ನನಗಿಂತ ಸೇವಾಹಿರಿತನದಲ್ಲಿ, ಅಂಕಗಳಲ್ಲಿ, ಪುಸ್ತಕ ಪ್ರಕಟಣೆಯಲ್ಲಿ ಸಮನಾಗಿಲ್ಲದವರಿಗೆಲ್ಲ ಬಡ್ತಿ ಕೊಟ್ಟು ನನ್ನನ್ನು ಪ್ರಜ್ಞಾಪೂರ್ವಕವಾಗಿ ಹಿಂದಿಕ್ಕಿದಾಗ ಮಾನಸಿಕ ಹಿಂಸೆಯನ್ನು ಅನುಭವಿಸಿದ್ದೇನೆ. ಬಹುಶಃ ಗುಂಪುಗಾರಿಕೆಯಲ್ಲಿ ಗುರುತಿಸಿಕೊಳ್ಳದಿದ್ದುದರಿಂದ, ಆಯಕಟ್ಟಿನ ಅಧಿಕಾರ ಸ್ಥಾನದಲ್ಲಿರುವವರ ಮನವೊಲಿಸದೆ, ರಾಜಕೀಯ ಒತ್ತಡ ತರದೆ ಅನೇಕ ಅವಕಾಶ, ಬಡ್ತಿಗಳಿಂದ ವಂಚಿತಳಾದೆ. ಗುಂಪಿನ ನಡುವೆ ಗುರುತಿಸಿಕೊಳ್ಳುವ ಚಾಣಾಕ್ಷತನ ನನಗಿಲ್ಲದ್ದು ಒಂದು ಕಾರಣವಾಗಿರಬಹುದು. ಏನೇ ಆದರೂ ಹಿರಿಯ ವಿದ್ವಾಂಸರ ಸಂಪರ್ಕ, ಗ್ರಂಥ ಸಂಪಾದನೆಯ ಕೆಲಸಗಳು ನನ್ನನ್ನು ಜೀವಂತವಾಗಿಟ್ಟಿದ್ದವು. ಬೆಂಗಳೂರು ವಿಶ್ವವಿದ್ಯಾಲಯದ ಗೆಳೆಯರಾದ ಶಿವಣ್ಣನವರು ಯಾವಾಗಲು ಹೇಳುತ್ತಿದ್ದರು – 'ಮುಂದೆ ಭಾನುಮತಿಗೆ ಪ್ರಮೋಷನ್ ಬಂದಿತ್ತ ಅಂತ ಯಾರು ಕೇಳಲ್ಲ. ಯಾವ ಹೊಸ ಪುಸ್ತಕ ಸಂಪಾದಿಸಿದ್ದಾರೆ ಅಂತ ಮಾತ್ರ ಕೇಳುತ್ತಾರೆ' ಎಂದು. ವಿಶ್ವವಿದ್ಯಾಲಯಗಳು ಸೆಂಟರ್ ಆಫ್ ಎಕ್ಸಲೆನ್ಸ್ ಆಗಬೇಕು ಅಂತಾರೆ. ಆ ಶ್ರೇಷ್ಠತೆಗಳು ಉಳಿಯಬೇಕಾದರೆ ಹುದ್ದೆಗಳ ಆಯ್ಕೆ ಪ್ರಕ್ರಿಯೆಗಳಲ್ಲಿ ಗುಣಗ್ರಾಹಿ ಆಯ್ಕೆಗಳು ನಡೆಯಬೇಕು. ಹಾಗಾದಾಗ 30 ವರ್ಷ ಒಳ್ಳೆಯ ಕೆಲಸಗಳು ಅಲ್ಲಿ ನಡೆಯುತ್ತವೆ.

◆ **ನೀವು ಆಯ್ಕೆ ಮಾಡಿಕೊಂಡ ಕ್ಷೇತ್ರ ಪರಿಶ್ರಮ, ಪಾಂಡಿತ್ಯ ಹಾಗೂ ತೊಡಗಿಕೊಳ್ಳುವಿಕೆಯನ್ನು ನಿರೀಕ್ಷಿಸುವಂತಹದ್ದು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಈ ಕೆಲಸಕ್ಕೆ ನಿಮ್ಮನ್ನು ನೀವೇ ಕೊಟ್ಟು ಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಿಮ್ಮ ಕುಟುಂಬದವರ ಸಹಕಾರ ಹೇಗಿತ್ತು? ಕುಟುಂಬಕ್ಕೆ ಹೆಚ್ಚಿನ ಗಮನಕೊಡಲು ಸಾಧ್ಯವಾಯಿತೆ?**

ನಾನು 1975ರಲ್ಲಿ ಕೆಲಸಕ್ಕೆ ಸೇರಿದೆ. ನಾನಾಗ ಹಾಸ್ಟೆಲ್‌ನಲ್ಲಿದ್ದೆ. ನಮ್ಮ ತಂದೆ ನನ್ನನ್ನು ತುಂಬಾ ಪ್ರೊಟೆಕ್ಟಿವ್ ಆಗಿ ಬೆಳೆಸಿದ್ದರು. ಪಿ.ಜಿ.ಯಲ್ಲಿ ಬಿಡಲು ಅವರಿಗೆ ಸುತಾರಾಂ ಇಷ್ಟವಿರಲಿಲ್ಲ. ನಾನು ಮೈಸೂರು ವಿಶ್ವವಿದ್ಯಾಲಯದಲ್ಲಿ ಕೆಲಸಕ್ಕೆ ಸೇರಿದ ಕಾಲದಲ್ಲಿ ರಾಮಣ್ಣನವರು ಅಲ್ಲೇ ಜಾನಪದ ವಿಭಾಗದಲ್ಲಿ ಫೀಲ್ಡ್ ಅಸಿಸ್ಟೆಂಟ್ ಆಗಿದ್ದರು. ನನಗವರ ಪರಿಚಯವಿರಲಿಲ್ಲ. ಆದರೂ ಅವರು ನನ್ನನ್ನು ಗಮನಿಸುತ್ತಾ ಇದ್ದರಂತೆ. ಅವರ ಮನಸ್ಸಿನಲ್ಲಿ 'ಮದುವೆಯಾದರೆ ಈ ಹುಡುಗಿಯನ್ನು ಆಗಬೇಕು' ಅನ್ನಿಸಿತಂತೆ. ಆ ನಂತರ ಸಾಂಪ್ರದಾಯಿಕವಾಗಿ ಮದುವೆಯಾಯಿತು. ನಾವಿಬ್ಬರು ಒಂದೇ ಕಡೆ ಕೆಲಸಕ್ಕೆ ಹೋಗುತ್ತಿದ್ದುದರಿಂದ ಅವರೇ ನನ್ನನ್ನು ಗಾಡಿಯಲ್ಲಿ ಕರೆದುಕೊಂಡು ಹೋಗಿ ಕರೆತರುತ್ತಿದ್ದರು. ನನಗೆ ಗಾಡಿ ಓಡಿಸಲು ಬಾರದಿದ್ದುದರಿಂದ ಆಟೊ ಬಸ್ಸಿಗೆ ಕಾಯುವ ಪ್ರಮೇಯವೇ ಬರಲಿಲ್ಲ. ಮದುವೆಯಲ್ಲಿ ಇದ್ದ ಬದ್ಧತೆಯನ್ನು ಇಲ್ಲಿಯವರೆಗೂ ಕಾಪಾಡಿಕೊಂಡು ಬಂದಿದ್ದಾರೆ. ನನ್ನ ಎಲ್ಲ ಸಾಧನೆಗಳಿಗೂ ನಿಜವಾಗಿ ನನಗಿಂತ ಹೆಚ್ಚು ಸಂಭ್ರಮಿಸುವುದು ಅವರೇ. ನನ್ನ ಅಭ್ಯುದಯದಲ್ಲಿ ಅವರ ಪಾಲುದಾರಿಕೆಯೂ ಇದೆ.

◆ **ತಂತ್ರಜ್ಞಾನದ ಅಳವಡಿಕೆಯಿಂದ ಈ ಕ್ಷೇತ್ರಕ್ಕೆ ಆಗಿರುವ ಅನುಕೂಲಗಳೇನು?**

ತಂತ್ರಜ್ಞಾನದಿಂದ ಬಹಳಷ್ಟು ಅನುಕೂಲವಾಗಿದೆ. ತಂತ್ರಜ್ಞಾನದ ಬಳಕೆ ಸಂಪಾದಕರ ಶ್ರಮವನ್ನು ಕಡಿಮೆ ಮಾಡಿದೆ. ಮತ್ತೊಂದು ಅನುಕೂಲವೆಂದರೆ ಹಿಂದೆ ಹಸ್ತಪ್ರತಿಗಳನ್ನು ಪರಾಮರ್ಶಿಸಲು